## ಪ್ರಾರ್ಥನೆ

### ಸಂಜ್ಞಾನ ಸೂಕ್ತಮ್

**ಓಂ ॥ ಸಂ ಗಚ್ಛಧ್ವಂ ಸಂ ವದಧ್ವಂ**
**ಸಂ ವೋ ಮನಾಂಸಿ ಜಾನತಾಮ್ ।**
**ದೇವಾ ಭಾಗಂ ಯಥಾ ಪೂರ್ವೇ**
**ಸಂಜಾನಾನಾ ಉಪಾಸತೇ ॥**

**ಸಮಾನೋ ಮಂತ್ರಃ ಸಮಿತಿಃ ಸಮಾನೀ**
**ಸಮಾನಂ ಮನಃ ಸಹ ಚಿತ್ತಮೇಷಾಮ್ ।**
**ಸಮಾನಂ ಮಂತ್ರಮಭಿ ಮಂತ್ರಯೇ ವಃ**
**ಸಮಾನೇನ ವೋ ಹವಿಷಾ ಜುಹೋಮಿ ॥**

**ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ ।**
**ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ ॥**

ನೀವು ಯಾವಾಗಲೂ ಜೊತೆಯಲ್ಲೇ ಹೋಗಿರಿ, ಸಮಾನವಾದ ರೀತಿಯಲ್ಲೇ ಮಾತನಾಡಿ, ನಿಮ್ಮ ಮನಸ್ಸು ಸದಾ ಒಂದಾಗಿರಲಿ. ಹಿಂದಿನ ಕಾಲದ ದೇವತೆಗಳು ಹೇಗೆ ಏಕತೆಯಿಂದ ಹವಿಸ್ಸಿನ ಭಾಗಗಳನ್ನು ಸ್ವೀಕರಿಸಿದರೋ, ಅದೇರೀತಿ ನೀವೂ ದೇವತೆಗಳ ಅನುಗ್ರಹವನ್ನು ಸಮಾನವಾಗಿ ಸ್ವೀಕರಿಸಿ.

ನಿಮ್ಮ ಸ್ತುತಿ, ಮಂತ್ರಗಳು ಸಮಾನವಾಗಿರಲಿ. ಅದರ ಫಲವೂ ನಿಮಗೆ ಸಮವಾಗಿ ಲಭಿಸಲಿ. ನಿಮ್ಮ ಮನಸ್ಸುಗಳೂ ಒಂದೇ ವಿಧವಾಗಿ ಏಕತೆಯಿಂದ ಕೂಡಿರಲಿ. ಎಲೈ ದೇವತೆಗಳೇ, ನಾನು ನಿಮ್ಮೆಲ್ಲರಿಗೆ ಒಂದೇ ವಿಧವಾದ ಮಂತ್ರ , ಹವಿಸ್ಸುಗಳನ್ನು ಅರ್ಪಿಸುತ್ತೇನೆ.

ನಿಮ್ಮಲ್ಲಿ ಏಕತೆಯುಂಟಾಗಲು ನಿಮ್ಮ ಉದ್ದೇಶ, ಬಯಕೆ, ಆಲೋಚನೆ ಸಮಾನವಾಗಿರಲಿ. ನಿಮ್ಮ ಹೃದಯ, ಮನಃಪ್ರವೃತ್ತಿಗಳು ಸಮಾನವಾಗಿರಲಿ. *(ಋಗ್ವೇದ, ೧೦.೧೯೧)*

### ನಿತ್ಯಪ್ರಾರ್ಥನೆ

**ಆತ್ಮಾ ತ್ವಂ ಗಿರಿಜಾ ಮತಿಃ ಸಹಚರಾಃ**
**ಪ್ರಾಣಾಃ ಶರೀರಂ ಗೃಹಂ ।**
**ಪೂಜಾ ತೇ ವಿಷಯೋಪಭೋಗರಚನಾ**
**ನಿದ್ರಾ ಸಮಾಧಿಸ್ಥಿತಿಃ ॥**
**ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ**
**ಸ್ತೋತ್ರಾಣಿ ಸರ್ವಾ ಗಿರೋ ।**
**ಯದ್ಯತ್ಕರ್ಮ ಕರೋಮಿ ತತ್ತದಖಿಲಂ**
**ಶಂಭೋತವಾರಾಧನಮ್ ॥**

ನೀನು ಆತ್ಮನು, ಬುದ್ಧಿಯೇ ಪಾರ್ವತಿಯು, ಪ್ರಾಣಗಳೇ ಸಹಚರರು, ಶರೀರವೇ ಗೃಹವು. ವಿವಿಧ ವಿಷಯೋಪಭೋಗಗಳ ಯೋಜನೆಯೇ ನಿನ್ನ ಪೂಜೆಯು. ನಿದ್ರೆಯೇ ಸಮಾಧಿಸ್ಥಿತಿಯು. ನನ್ನ ಪಾದಗಳ ಸಂಚಾರ ವಿಧ್ಯುಕ್ತವಾಗಿ ನಿನಗೆ ಮಾಡಿದ ಪ್ರದಕ್ಷಿಣೆ. ಆಡಿದ ಮಾತುಗಳೆಲ್ಲವೂ ನಿನಗೆ ಹಾಡಿದ ಸ್ತೋತ್ರಗಳು. ಹೇ, ಶಂಭುವೇ, ಯಾವ ಯಾವ ಕರ್ಮಗಳನ್ನು ಮಾಡುವೆನೋ ಅವುಗಳೆಲ್ಲವೂ ನಿನ್ನ ಆರಾಧನೆ.

**ಕರಚರಣಕೃತಂ ವಾಕ್ಕಾಯಜಂ ಕರ್ಮಜಂ ವಾ ।**
**ಶ್ರವಣನಯನಜಂ ವಾ ಮಾನಸಂ ವಾಽಪರಾಧಮ್ ॥**
**ವಿಹಿತಮಹಿತಂ ವಾ ಸರ್ವಮೇತತ್ ಕ್ಷಮಸ್ವ ।**
**ಜಯಜಯ ಕರುಣಾಬ್ಧೇ ಶ್ರೀ ಮಹಾದೇವ ಶಂಭೋ ॥**

ಹೇ ಕರುಣಾಸಾಗರ, ಕೈಕಾಲುಗಳಿಂದಾದ, ಮಾತಿನಿಂದಾದ, ದೇಹದಿಂದ ಆದ, ಕರ್ಮಗಳಿಂದಾದ, ಕಿವಿ ಕಣ್ಣುಗಳಿಂದಾದ, ಇಲ್ಲವೇ ಮನಸ್ಸಿನಿಂದಾದ, ವಿಹಿತವಾದ ಅಥವಾ ಅವಿಹಿತವಾದ ಎಲ್ಲಾ ಅಪರಾಧಗಳನ್ನು ಕ್ಷಮಿಸು. ಮಹಾದೇವನೇ, ಶಂಭುವೇ ನಿನಗೆ ಜಯವಾಗಲಿ.

*(ಶಿವಾಪರಾಧ ಕ್ಷಮಾಪಣ ಸ್ತೋತ್ರದಿಂದ)*

### ಸೂಕ್ತಿಪ್ರಭ

''ಮನುಷ್ಯ ಸಂಸಾರಿಯಾಗುವುದು ಅಥವಾ ಸಂನ್ಯಾಸಿಯಾಗುವುದು ಎಲ್ಲ ಆತನ ಇಚ್ಛೆಯಂತೆ. ಅದಕ್ಕಾಗಿಯೆ ಎಲ್ಲಾ ಭಾರವನ್ನು ಆತನ ಮೇಲೆ ಹೊರಿಸಿಬಿಟ್ಟು ಈ ಪ್ರಪಂಚದಲ್ಲಿ ನಿನ್ನ ಕೆಲಸ ಕಾರ್ಯಗಳನ್ನು ಮಾಡು. ಅದನ್ನು ಬಿಟ್ಟರೆ ಮತ್ತೆ ಇನ್ನೇನು ತಾನೆ ಸಾಧ್ಯ?

ಸಂಸಾರಿ ಜೀವನ್ಮುಕ್ತಿಯನ್ನು ಪಡೆದರೆ, ಆತ ಇಚ್ಛೆಪಟ್ಟರೆ ಅನಾಯಾಸವಾಗಿ ಸಂಸಾರದಲ್ಲೇ ಇರಬಲ್ಲ. ಯಾರಿಗೆ ಜ್ಞಾನ ದೊರೆತಿದೆಯೊ ಅವರಿಗೆ 'ಈ ಸ್ಥಳ', 'ಆ ಸ್ಥಳ' ಎಂಬ ಭೇದ ಭಾವವೇನಿರದು. ಅವರಿಗೆ ಎಲ್ಲಾ ಒಂದೇ.''

—ಶ್ರೀರಾಮಕೃಷ್ಣ ಪರಮಹಂಸರು

''ಪತಿ, ಪತ್ನಿಯರಿಬ್ಬರೂ ಆಧ್ಯಾತ್ಮಿಕ ಆಧನೆಯಲ್ಲಿ ಒಂದೇ ಬಗೆಯ ಭಾವವನ್ನು ಹೊಂದಿದ್ದರೆ ಅವರ ಆಧ್ಯಾತ್ಮಿಕ ಪ್ರಗತಿ ಸುಲಭವಾಗುವುದು.''

— ಶ್ರೀಮಾತೆ ಶಾರದಾದೇವಿ

''ಗೃಹಸ್ಥನು ಸಮಾಜ ಮತ್ತು ಜೀವನಕ್ಕೆ ಕೇಂದ್ರ. ಆತ ಐಶ್ವರ್ಯವನ್ನು ಧಾರ್ಮಿಕವಾಗಿ ಸಂಪಾದಿಸಿ ಅದನ್ನು ಸದ್ವಿನಿಯೋಗ ಮಾಡುವುದು ಪೂಜೆಗೆ ಸಮ. ಒಳ್ಳೆಯ ಮಾರ್ಗದಿಂದ ಒಳ್ಳೆಯದಕ್ಕಾಗಿ ಹಣವನ್ನು ಸಂಪಾದಿಸಿದರೆ ಸಂನ್ಯಾಸಿ ತನ್ನ ಗುಹೆಯಲ್ಲಿ ಮುಕ್ತಿಗಾಗಿ ಪ್ರಾರ್ಥಿಸುವಂತೆಯೇ ಅವನೂ ಮುಕ್ತಿಯನ್ನು ಪಡೆಯುವನು. ಅವರಿಬ್ಬರಲ್ಲಿಯೂ ಶರಣಾಗತಿ ಮತ್ತು ತ್ಯಾಗ, ದೇವರಿಗೆ ಮತ್ತು ಆತನ ಮಕ್ಕಳಿಗೆ ಭಿನ್ನ ಭಿನ್ನವಾಗಿ ವ್ಯಕ್ತವಾಗುತ್ತಿರುವುದು.''

— ಸ್ವಾಮಿ ವಿವೇಕಾನಂದ